# 1

ಸಿಗರೇಟಿನ ಕಟ್ಟವನ್ನು ತುಸು ಕೊಡವಿ, ಮತ್ತೊಂದು ಧಂ ಎಳೆದ ರಾಘವನ್‌ರಿಗೆ ನಿರಾಳವಾಯಿತು. ಬಿಳಿಯ ಸಿಗರೇಟು ಸೃಜಿಸುತ್ತಿದ್ದ ಚಿತ್ತಾರದ ಹೊಗೆಯನ್ನೇ ದಿಟ್ಟಿಸಿದರು. ಈ ಸ್ಮೋಕ್ ಅಂಡ್ ವೈಟ್ ಕಾಂಬಿನೇಶನ್ ಬಗ್ಗೆ ಅವರಿಗ್ಯಾವಾಗಲೂ ಸೋಜಿಗ. ಬಿಳಿ ಹಾಳೆಯೊಳಗಿರುವ ಮಣ್ಣಿನ ಬಣ್ಣದ ತಂಬಾಕು ಕೆಂಪಗಿನ ಬೆಂಕಿಯ ಸಹವಾಸದಲ್ಲಿ ನೀಡುವ ಹೊಗೆ, ಒಳಗಿರುವ ಭಾರವನ್ನೆಲ್ಲಾ ಹೊರಹಾಕಿ ಸೇದಿದವನನ್ನು ಹಗುರಾಗಿಸುವುದಿದೆಯಲ್ಲಾ! ವಾವ್! ಗೆಳೆಯ ರೂಪೇಶ್ ಜೊತೆ, "ಅಲ್ಲ ರೂಪೇಶ್, ಈ ಸಿಗರೇಟು ಎಂತಾ ಅದ್ಭುತ ರೀ! ಮನುಷ್ಯನ ಅದಮ್ಯ ಕುತೂಹಲದ ಪ್ರಾಡಕ್ಟ್ ಇದು" ಅಂದಾಗ, "ಅಪ್ಪಾ ತಂದೆ, ತಿಂಗಳಿಗೋ ಎರಡು ತಿಂಗಳಿಗೋ ಒಂದು ಸಿಗರೇಟ್ ಹಚ್ಚಿ ಪುರಾಣ ಹೇಳ್ಬೇಡ. ಈ ಬಡ್ಡಿಮಕ್ಕಳ ಸಹವಾಸದಲ್ಲಿ ದಿನಕ್ಕೆ ಒಂದು ಪ್ಯಾಕ್ ದಾಟಬಾರದು ಅಂದ್ಕೊಂಡ್ರು ಆಗ್ತಾಯಿಲ್ಲ. ಸಿಗರೇಟು ಹೊಗೇಲಿ ಎಲ್ಲಿ ಯಾವ ರೋಗ ಅಡರಿಕೊಳ್ಳುತ್ತೋ ಅಂತ ನನಗೆ ಚಿಂತೆ. ಮುಚ್ಕೊಂಡು ಧಂ ಎಳಿ" ಅಂದಿದ್ದು ನೆನಪಾಗಿ ರಾಘವನ್ನರಿಗೆ ನಗು ಬಂತು. "ಮನುಷ್ಯ ಯಾವಾಗಲೂ ತಿಕ್ಕಲು ಜೀವಿಯೇ." ಇದು ಷರೀಫ್ ಮೇಷ್ಟ್ರ ಮಾತು. ಡ್ರಾನಲ್ಲಿದ್ದ ಮೇಷ್ಟ್ರ ಫೋಟೊ ಕೈಗೆತ್ತಿಕೊಂಡರು. ಷರೀಫರು ಹೇಳಿದ್ದ ಪದ್ಯವೊಂದರ ಸಾಲುಗಳು ನೆನಪಾದವು: "ಶಾಲೆಯಂಗಳವನ್ನೇ ದಿಟ್ಟಿಸುತ್ತ ನಿಂತಿದ್ದಾಗ/ ಕಾಣಿಸಿಕೊಂಡವರು ನಮ್ಮ ಟೀಚರು/ ಕೆತ್ತಿದ ವಿಗ್ರಹ ಅವರು." ಷರೀಫರೆಂಬೊ ವಿಗ್ರಹ ಇರುವುದಲ್ಲಾ ನನ್ನೊಂದಿಗೆ! ಕೈಯಲ್ಲಿದ್ದ ಫೋಟೊವನ್ನು ತುಸು ಹೊತ್ತು ದಿಟ್ಟಿಸಿ, ವಾಪಸ್ ಡ್ರಾನಲ್ಲಿಟ್ಟ ರಾಘವನ್ ರೂಪೇಶನ ವಿಚಾರಕ್ಕೆ ಮರಳಿದರು.

ಪಾಪ ರೂಪೇಶ್. ಪೇಶೆಂಟ್‌ಗಳ ಸಹವಾಸ ಸಾಕು ಅಂತ ಅಡ್ಮಿನಿಸ್ಟ್ರೇಶನ್ ಡ್ಯೂಟಿಗೆ ಹೋದ ಎರಡು ತಿಂಗಳಿಗೆ, "ಅಪ್ಪಾ ತಂದೆ, ಈ ಐಎಎಸ್‌ಗಳು ಏನು ಮೇಲಿಂದ ಉದುರಿದವರಾ? ನೆಲನೇ ನೋಡೋದಿಲ್ಲ! ಬಡ್ಡಿಮಕ್ಕಳು ಇಂಜೆಕ್ಷನ್ ಹೆಂಗ್ ಕೊಡ್ಬೇಕು ಗೊತ್ತಾ ಅಂತ ನಮ್ಗೇ ಪಾಠ ಹೇಳ್ತಾವೆ! ಇದನ್ನ ಹೆಂಗೋ ತಡ್ಕಂಡ್ರು... ಮುಂಡೇವು ದುಡ್ಡಿಗೆ ಬಾಯಿ ಬಿಟ್‌ಕಂಡೇ ಇರ್ತಾವೆ ಗುರು! ಎಷ್ಟು ಕೊಟ್ರೂ ಸಾಲಲ್ಲ. ನಮ್ಮಗಲ್ಲ, ಮಿನಿಷ್ಟ್ರಗೆ ಅಂತ ಮಿನಿಷ್ಟ್ರ ಗುಮ್ಮ ಬೇರೆ ಮುಂದಿಡ್ತಾವೆ" ಎಂದು ಪೇಚಾಡಿದ್ದು ನೆನಪಾಯಿತು. ಸರ್ಕಾರದ ಆಡಳಿತ ನಡೆಸೋ ಈ ಐಎಎಸ್‌ಗಳಿಗೆ ಅರ್ಥವಾಗದೇ ಇರೋದು ಏನೂ ಇರಲ್ಲ. ಎಲ್ಲಾ ಗೊತ್ತಿದೆ ಅನ್ನೋ ಕೊಬ್ಬು. ಇನ್ನು ನಮ್ದೇ ಸರ್ಕಾರ ಅನ್ನೋ ಆ ಮಂತ್ರಿಗಳಿಗೆ ಅರ್ಥವಾಗೋದು ಯಾವುದೂ ಈ ಲೋಕದಲ್ಲಿ ಇಲ್ಲ ಅಂದುಕೊಂಡು ಕಿಟಕಿಯಾಚೆಗೆ ಕಾಣುತ್ತಿದ್ದ ಕಟ್ಟಡಗಳ ಸಾಲು, ನಡುನಡುವೆ ಇಣುಕುತ್ತಿದ್ದ ಹಸಿರನ್ನು ಗಮನಿಸಿದರು. ಬಣ್ಣ ಬಣ್ಣದ ಉದ್ದನೆಯ ಕಟ್ಟಡಗಳ ನಡುವೆ ಇಣುಕುವ ಹಸಿರನ್ನು ನೋಡುವುದೇ ಒಂದು ಖುಷಿ. ಪ್ರಕೃತಿಗೆ ಪ್ರಕೃತಿನೇ ಸಮ.

ಇನ್ನೊಂದು ಜೋರಾದ ಧಂ ಎಳೆದು ಮೂಗಿನಿಂದ ಹೊರಬರುತ್ತಿದ್ದ ಹೊಗೆಯ ಸುರಳಿಗಳನ್ನೇ ಗಮನಿಸಿದರು. ಆ ಸುರಳಿಗಳು ಇಡೀ ಲೋಕವನ್ನೇ ಕಾಡುತ್ತಿರುವ ಕೊರೊನಾದ ಸಂಕೇತದಂತಿದ್ದವು. ಕೊರೊನಾದ ನಿರಂತರ ಸುಳಿಯಲ್ಲಿ ಸಿಲುಕಿ ಹೊರಬರಲಾಗದೇ ಒದ್ದಾಡುತ್ತಿರುವ ಲೋಕದಲ್ಲಿರುವ ಹುಲು ಮಾನವನಾದ ತಾನು ಡ್ಯೂಟಿಗೆ ಬಂದು ಹನ್ನೆರಡು ಗಂಟೆಗಳು ಕಳೆದಿವೆ ಎನ್ನುವುದನ್ನು ಟೇಬಲ್ ಗಡಿಯಾರ ಹೇಳುತ್ತಿತ್ತು. ಈ ಪುಟ್ಟ ಕೊಠಡಿಯಾಚೆಗಿನ ಐಸಿಯುನಲ್ಲಿ ಯಂತ್ರಗಳ ಸಹಾಯದಿಂದ ಉಸಿರಾಡುತ್ತಿರುವವರ ಸಾಲು, ಅದಾರಾಚೆಗಿನ ಕಾರಿಡಾರ್‌ನಲ್ಲಿ ಉಸಿರು ಬಿಗಿ ಹಿಡಿದು ಕಾಯುತ್ತಿರುವವರ ಗುಂಪು ಮತ್ತು ಅಲ್ಲಿ ಮಡುಗಟ್ಟಿರುವ ಅಸಹಾಯಕತೆಯ ಬಿಸಿ ಸಿಗರೇಟಿನ ಅಂಚಿನಲ್ಲಿ ಕೆಂಪಗೆ ಅಂಟಿ ಕುಳಿತಿರುವ ಬೆಂಕಿಯಂತಲ್ಲ, ಅದೊಂದು ಧಗಧಗಿಸುವ ಜ್ವಾಲೆಯೆಂದು ತಿಳಿದಿತ್ತು. ಮುಗಿದ ಸಿಗರೇಟನ್ನು ಆಷ್‌ಟ್ರೇಯಲ್ಲಿ ಅಮುಕಿ, ಎಮರ್ಜೆನ್ಸಿ ಎಕ್ಸಿಟ್